

ಪೇಟೆಗೆ ಹೋಗುವುದಿದ್ದರೆ ಮಾಲಾ ಅವಲಂಬಿಸುತ್ತಿದ್ದುದು ಸಿಟಿ ಬಸ್‌ಗಳನ್ನು. ರಶ್‌ನಲ್ಲಿ.. ಆ ನೂಕು ನುಗ್ಗಲಿನಲ್ಲಿ, ಒಂದು ಕೈಯಲ್ಲಿ ಬಸ್‌ನ ರಾಡ್ ಹಿಡಿದು, ಮತ್ತೊಂದು ಕೈಯಲ್ಲಿಯ ಸೆಲ್‌ಫೋನನ್ನು ಕಿವಿಗೆ ಹಚ್ಚಿ ಕಚಪಚ ಹರಟುತ್ತಾ ಹೋಗುವುದೆಂದರೆ ಮಾಲಾಳಿಗೆ ಸ್ವರ್ಗದೋಪರಿ. ಕಲಾಳಿಗೆ ಈ ನೂಕುನುಗ್ಗಲು ಆಗದು. ಆಕೆ ಸಂಚರಿಸುವುದು ಯಾವಾಗಲೂ ಮೆಟ್ರೋದಲ್ಲಿ. ಬಂದ ಒಂದು ಮೆಟ್ರೋ ರಶ್ ಆಗಿದ್ದರೆ ಅದನ್ನು ಹತ್ತುವವಳಲ್ಲ ಮಾಲಾ.`ಇನ್ನೊಂದು ತುಸು ಖಾಲಿ ಬರಬಹುದು ಎಂದು ಮತ್ತೊಂದಕ್ಕೆ ಕಾದು ನಿಲ್ಲುವವಳು.

ನಡಿಗೆಯಲ್ಲಿಯೂ ಅಷ್ಟೇ: ಇಬ್ಬರೂ ಪರಸ್ಪರ ತದ್ವಿರುದ್ಧ. ಪುಟಪುಟನೆ, ಜಿಂಕೆಯ ಮರಿಯಂತೆ ಓಡಓಡುತ್ತಾ ಹೋಗುವವಳು ಮಾಲಾ. ಅಳೆದೂ ಸುರಿದು ಎನ್ನುವಂತೆ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಡುತ್ತಾ, ನಿಧಾನವಾಗಿ ಸಾಗುವವಳು ಕಲಾ. ಪರಸ್ಪರ ಎದುರು ಬದರಿನ ರೂಮ್ ಆದರೂ ಇಬ್ಬರೂ ಒಂದೇ ಬಾರಿಗೆ ಬಾಗಿಲು ತೆಗೆದವರಲ್ಲ; ಒಂದೇ ಬಾರಿಗೆ ಬಾಗಿಲು ಮುಚ್ಚುವವರೂ ಅಲ್ಲ. ಮಾಲಾಳ ರೂಮ್ನ ಬಾಗಿಲು ತೆರೆದಿದ್ದರೆ, ಕಲಾಳ ರೂಮ್ ಬಾಗಿಲು ಮುಚ್ಚಿರುತ್ತದೆ ಎಂದೇ ಅರ್ಥ.

ರಾತ್ರಿ `ಡಣ್ ಎಂದು ಹತ್ತು ಹೊಡೆದರೆ ಮಾಲಾ ತನ್ನ ಹಾಸಿಗೆ ಸೇರುವವಳು. ಕಲಾಳ ವಿಷಯ ಹಾಗಲ್ಲ: ಗಂಟೆ ಹನ್ನೆರಡೋ, ಒಂದೋ,ಒಂದೂವರೆಯೋ ಎಷ್ಟೂ ಆದೀತು ಕಲಾ ಹಾಸಿಗೆ ಸೇರುವಾಗ.

ಬೆಳಿಗ್ಗೆ ಮಾಲಾ ತಡವಾಗಿ ಏಳುವವಳು. ಮಲಗುವುದು ಎಷ್ಟೇ ಹೊತ್ತಾಗಿರಲಿ ಆರು ಎಂದರೆ ಆರು..ಬೆಳಿಗ್ಗೆ ಆರಕ್ಕೇ ಕಲಾ ಏಳುವವಳೇ. ಪೇಸ್ಟು, ಸೋಪು,ಟವೆಲ್..ಸಣ್ಣ ಸಣ್ಣ ವಿಷಯಗಳಲ್ಲಿಯೂ ಇಬ್ಬರದೂ ಬೇರೆ ಬೇರೆ ಆಯ್ಕೆಗಳೇ.

ಸ್ನಾನದ ಸಮಯದಲ್ಲಿಯೂ ಅಷ್ಟೇ: ಮಾಲಾ ಐದ್ದತ್ತು ನಿಮಿಷಗಳಲ್ಲಿ ಸ್ನಾನ ಮುಗಿಸಿದರೆ ಕಲಾ ತನ್ನ ಸ್ನಾನಕ್ಕೆ ಕನಿಷ್ಠ ಮುಕ್ಕಾಲು ಅಥವಾ ಒಂದು ತಾಸು ತೆಗೆದುಕೊಳ್ಳುವವಳೇ.

ಹೀಗೆ.. ಸ್ವಭಾವ, ಗುಣ, ನಡತೆ..ಬಹುತೇಕ ಎಲ್ಲದರಲ್ಲಿಯೂ ಈ ಇಬ್ಬರೂ ಪರಸ್ಪರ ವಿರುದ್ಧದವರೇ. ಹಾಗಾಗಿಯೇ ಇವರ ಗೆಳತಿಯರು `ಒಬ್ಬಳು ಪೂರ್ವ; ಇನ್ನೊಬ್ಬಳು ಪಶ್ಚಿಮ ಎನ್ನುತ್ತಿದ್ದುದು.

ಸಣ್ಣಪುಟ್ಟ ವಿಷಯಗಳ ಬಗ್ಗೆಯೂ ಈ ಇಬ್ಬರ ನಡುವೆ ಆಗಾಗ ಜಗಳ ನಡೆಯುವುದುಂಟು. ಆ ಜಗಳ ತಮ್ಮ ವಿಷಯಕ್ಕೇ ಸಂಬಂಧಿಸಿದ್ದು ಆಗಿರಬೇಕು ಎಂದೇನೂ ಇಲ್ಲ. ಅವಳು ಒಬ್ಬಳನ್ನು ವಹಿಸಿಕೊಂಡರೆ ಇವಳು ಮತ್ತೊಬ್ಬಳನ್ನು ವಹಿಸಿಕೊಂಡು ಅವರ ಜಗಳದ ನಡುವೆ ಈ ಇವರು ಮೂಗು ತೂರಿಸಿ ಪರಸ್ಪರ ಜಗಳವಾಡುತ್ತಿದ್ದರು. ಎಷ್ಟೋ ಬಾರಿ ಅದು ತಾರಕಕ್ಕೂ ಏರುತ್ತಿತ್ತು. ಜಗಳವಾಡುತ್ತಿರುವ ಈ ಪೂರ್ವ ಪಶ್ಚಿಮವನ್ನು ಸಮಾಧಾನಪಡಿಸಲು ಗೆಳತಿಯರು ಹರಸಾಹಸ ಪಡಬೇಕಿತ್ತು.

ಜಗಳ, ಪರಸ್ಪರ ನಿಂದನೆ, ಬೈಯ್ದಾಟ ನಿಲ್ಲದೇ ಇದ್ದಾಗ ಹಾಸ್ಟೆಲ್‌ನ ವಾರ್ಡನ್‌ಗೆ ಬುಲಾವ್ ಹೋಗುತ್ತಿತ್ತು. ಅವರು ಬಂದು ತಮ್ಮೆಲ್ಲಾ ಜಾಣ್ಮೆಯನ್ನು ಪ್ರಯೋಗಿಸಿ ಇಬ್ಬರ ನಡುವಿನ ಜಗಳವನ್ನು, ಪರಸ್ಪರ ದೂಷಣೆಯನ್ನು ತಹಬಂದಿಗೆ ತರಬೇಕಾಗುತ್ತಿತ್ತು.

ಅಸಲಿಗೆ ಎಂದರೆ ಈ ಇಬ್ಬರ ನಡುವಿನ ದ್ವೇಷಕ್ಕೆ ಕಾರಣ ಏನು ಎಂಬುದು ಅವರ ಗೆಳತಿಯರಿಗಾಗಲೀ, ಹಾಸ್ಟೆಲ್‌ನ ವಾರ್ಡನ್‌ಗಾಗಲೀ, ಇವರಿಗೆ ಕಲಿಸುತ್ತಿರುವ ಪ್ರೊಫೆಸರ್‌ಗಳಿಗಾಗಲೀ ತಿಳಿದಿರಲಿಲ್ಲ. ಅಷ್ಟೇ ಏಕೆ..ತಾವು ಪರಸ್ಪರ ಯಾಕೆ ದ್ವೇಷಿಸುತ್ತಿದ್ದೇವೆ, ಒಬ್ಬರ ಮೇಲೆ ಇನ್ನೊಬ್ಬರು ಏಕೆ ಕಿಡಿ ಕಾರುತ್ತಿದ್ದೇವೆ ಎಂಬುದು ಈ ಮಾಲಾ ಕಲಾರಿಗೂ ತಿಳಿದಿರಲಿಲ್ಲ!

ಒಟ್ಟಿನಲ್ಲಿ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗದು ಅಷ್ಟೇ!

ಹೀಗಿರುವಾಗ..

ಒಮ್ಮೆ ಹಾಸ್ಟೆಲ್ ವಾರ್ಡನ್ ಅರ್ಜೆಂಟಾಗಿ ತಮ್ಮ ಊರಿಗೆ ಹೋಗಬೇಕಾದ ಸಂದರ್ಭ ಒದಗಿ ಬಂತು. ಅವರ ತಾಯಿಗೆ ಸೀರಿಯಸ್ ಎನ್ನುವ ಕರೆ ಅವರ ಪ್ರಯಾಣಕ್ಕೆ ಕಾರಣ. ತಾವು ಊರಿಗೆ ಹೊರಡುವ ಮೊದಲು ಈ ಇಬ್ಬರನ್ನೂ ಹಾವು ಮುಂಗುಸಿಗಳಂತೆ ಇರುವ ಈ ಇಬ್ಬರನ್ನೂತಮ್ಮ ಬಳಿ ಕರೆಸಿಕೊಂಡು ಸಾಕಷ್ಟು ಬುದ್ಧಿ ಹೇಳಿದರು ಹಾಸ್ಟೆಲ್‌ನ ವಾರ್ಡನ್.

`ಮುಂದೆ ಓದಿ ನೀವು ನೌಕರಿ ಹಿಡಿಯುವವರು ಅಥವಾ ಮದುವೆಯಾಗಿ ಸಂಸಾರ ಸಾಗಿಸುವವರು. ಇಬ್ಬರೂ ಒಂದೇ ಕಂಪನಿಯಲ್ಲಿ ನೌಕರಿ ಮಾಡುವ ಸಂದರ್ಭ ಬಂದರೆ ಇಬ್ಬರ ನಡುವಿನ ಈ ದ್ವೇಷ ಇಬ್ಬರಿಗೂ ತೊಂದರೆ ನೀಡುತ್ತದೆ. ಅದಿಲ್ಲವಾದಲ್ಲಿ..ಬೇರೆ ಬೇರೆ ಕಂಪನಿಗಳಲ್ಲಿ,ಬೇರೆ ಬೇರೆಯದಾದ ನೌಕರಿಯನ್ನೇ ಹಿಡಿದಿರಿ ಎಂದಾದರೆ..ಅಲ್ಲಿ ನೀವು ನಿಮ್ಮ ಕಲೀಗ್ಸ್ ಜೊತೆ ಜಗಳ ಕಾಯುತ್ತೀರಾ.. ಅವರೊಂದಿಗೆ ಹೊಂದಿಕೊಂಡು ಹೋಗಬೇಕಾಗುತ್ತದೆ. ಇನ್ನು ಮದುವೆಯಾಗಿ ಇಬ್ಬರೂ ಒಂದೇ ಮನೆ ಸೇರಿದರೆ ಏನಾದೀತು..ಬೇಡಾ..ಮದುವೆಯಾಗಿ ಬೇರೆ ಬೇರೆ ಮನೆ ಸೇರಿದರೆ ಅಲ್ಲಿ..ಅಂದರೆ ಈ ಮಾಲಾಳ ಗಂಡನ ಮನೆಯಲ್ಲಿ ಜಗಳ ಕಾಯಲು ಈ ಕಲಾ ಇರುತ್ತಾಳಾ?ಈ ಕಲಾಳ ಗಂಡನ ಮನೆಯಲ್ಲಿ ಆ ಮಾಲಾ ಇರುತ್ತಾಳಾ..?ದ್ವೇಷ ಬಿಡಿ; ಸ್ನೇಹಿತೆಯರಾಗಿ ಬಾಳಿ..

ಕಾರು ಹತ್ತುವ ಮುನ್ನವೂ ಹಾಸ್ಟೆಲ್‌ನವಾರ್ಡನ್ ಈ ಇಬ್ಬರಿಗೂ ಇದೇ ಮಾತನ್ನು ಇನ್ನೊಮ್ಮೆ, ಮಗದೊಮ್ಮೆ ಹೇಳಿದರು.

ಎರಡು ಮೂರು ದಿನ ಕಳೆದವು.

ಇಲ್ಲ..

ಈ ಇಬ್ಬರಲ್ಲಿ ಯಾವುದೇ ಬದಲಾವಣೆಯೂ ಆಗಲಿಲ್ಲ.

ಇಬ್ಬರ ನಡುವಿನ ದ್ವೇಷ ಅಡಗಲಿಲ್ಲ; ಸ್ನೇಹ ಮೂಡಲಿಲ್ಲ.

ನಾಲ್ಕನೆಯ ದಿನ ಒಂದು ಆಘಾತಕಾರಕ ಸುದ್ದಿ ಬಂತು!

ಮಾಲಾ ಮತ್ತು ಕಲಾ ಇಬ್ಬರಿಗೂ ಆ ಆಘಾತಕರ ಸುದ್ದಿ ಒಮ್ಮೆಲೇ ತಿಳಿಯಿತು.

ಪರಸ್ಪರ ಎದುರು ಬದರಾಗಿದ್ದ ಅವರ ರೂಮ್‌ಗಳ ಬಾಗಿಲು ಒಮ್ಮೆಲೇ ಏಕಕಾಲದಲ್ಲಿ ತೆರೆಯಲ್ಪಟ್ಟವು.

‘ಕೇಳಿದೆಯೇನೇ ಮಾಲಾ.. ನಮ್ಮ ವಾರ್ಡನ್ ತಮ್ಮ ಊರಿನಿಂದ ಮರಳಿ ಬರುತ್ತಿರುವಾಗ ದೇವಿಮನೆ ಘಾಟ್‌ನ ತಿರುವೊಂದರ ಬಳಿ ಸಂಭವಿಸಿದ ಕಾರ್ ಆ್ಯಕ್ಸಿಡೆಂಟ್‌ನಲ್ಲಿ..

‘ಕೇಳಿದೆಯೇನೇ ಕಲಾ..ನಮ್ಮ ವಾರ್ಡನ್ ತಮ್ಮ ಊರಿನಿಂದ ಮರಳಿ ಬರುತ್ತಿರುವಾಗ ದೇವಿಮನೆ ಘಾಟ್‌ನ ತಿರುವೊಂದರ ಬಳಿ ಸಂಭವಿಸಿದ ಕಾರ್ ಆ್ಯಕ್ಸಿಡೆಂಟ್‌ನಲ್ಲಿ..

ಅತ್ತ ಮಾಲಾ ತನ್ನ ರೂಮಿನ ಬಾಗಿಲ ಬಳಿಯಿಂದ ಕಲಾಳತ್ತ..

ಇತ್ತ ಕಲಾ ತನ್ನ ರೂಮಿನ ಬಾಗಿಲ ಬಳಿಯಿಂದ ಮಾಲಾಳತ್ತ..

ಧಾವಿಸಿ ಬಂದರು..

ಇಬ್ಬರೂ ಪರಸ್ಪರ ಒಬ್ಬರನ್ನೊಬ್ಬರು ತಬ್ಬಿಕೊಂಡು ಗೋಳೋ ಎಂದು ಅಳತೊಡಗಿದರು..